# ಸ್ವಾಮಿ ನಿಖಿಲಾನಂದ (೧೮೯೫-೧೯೭೩)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**

**ಭಾಗ ೩**

ಅನಂತರದ ಸಮಯದಲ್ಲಿ ಸ್ವಾಮಿ ನಿಖಿಲಾನಂದರು ತಮ್ಮ ಸ್ವಂತ ಲೇಖನದಲ್ಲಿ ಹಾಗೂ ಮಾತಿನ ನಡುವೆ ತಮ್ಮ ನೆನಪುಗಳನ್ನು ಹೇಳಿಕೊಂಡಿದ್ದರು. ಶ್ರೀಮಾತೆಯವರಿಂದ ದೀಕ್ಷೆಯನ್ನು ಪಡೆದ ವಿಷಯವಾಗಿ ಅವರು ಹೀಗೆ ಬರೆದಿದ್ದಾರೆ:

''ಶ್ರೀಮಾತೆಯವರು ಶಿಷ್ಯರನ್ನು ಪರೀಕ್ಷಿಸುತ್ತಿರಲಿಲ್ಲ. ಅವರೊಮ್ಮೆ ಹೇಳಿದ್ದರು, 'ನನ್ನ ಬಳಿ ಬರಲು ಬಯಸುವವರು ಪ್ರಾಪಂಚಿಕ ಬಂಧನವನ್ನು ಕಿತ್ತೊಗೆದು ಬರಲಿ. ನಾನಾಗಿ ಅವರನ್ನು ಕರೆಯುವುದಿಲ್ಲ.'

''ಅವರನ್ನು ತಿಳಿದ ವ್ಯಕ್ತಿಗಳು ವಿರಳ. ೧೯೧೬ರಲ್ಲಿ ನಾನು ಬೇಲೂರು ಮಠದ ಸ್ವಾಮಿ ಪ್ರೇಮಾನಂದರ ಬಳಿ ಸಾರಿದಾಗ, ಅವರು ಠಾಕೂರರ ಓರ್ವ ವಿಶಿಷ್ಟ ಶಿಷ್ಯರೊಬ್ಬರಿಂದ ದೀಕ್ಷೆಯನ್ನು ಪಡೆಯಲು ಹೇಳಿದರು. ನಾನು 'ಶ್ರೀಮಾತೆಯವರೆಂದರೆ ಯಾರು?' ಎಂದು ಪ್ರಶ್ನಿಸಿದಾಗ ಅವರು ನನ್ನ ಅಜ್ಞಾನಕ್ಕಾಗಿ ನನ್ನನ್ನು ಚೆನ್ನಾಗಿ ಬೈದರು.''

ನಂತರ ಸ್ವಾಮಿ ಪ್ರೇಮಾನಂದರು ಹೇಳಿದಂತೆ ಅವರು ಜಯರಾಂಬಾಟಿಗೆ ಹೋಗಿ ಶ್ರೀಮಾತೆಯವರಿಂದ ದೀಕ್ಷೆ ಪಡೆದರು. ನ್ಯೂಯಾರ್ಕ್‌ನಲ್ಲಿ ಅವರೊಮ್ಮೆ ಊಟದ ಟೇಬಲ್‌ನಲ್ಲಿ ಹೇಳಿದರು: ''ಜಯರಾಂಬಾಟಿಯಲ್ಲಿ ಊಟ ಮಾಡುವಾಗ ಶ್ರೀಮಾತೆಯವರು ನನ್ನೆದುರು ಕುಳಿತು ಅತ್ಯಂತ ಪ್ರೀತಿಯಿಂದ ತಿನ್ನಿಸುತ್ತಿದ್ದರು, ಹಾಗೂ ನಾನು ತಿನ್ನುವುದನ್ನು ನೋಡುತ್ತಿದ್ದರು. ನಾನು ಜಯರಾಂಬಾಟಿಯನ್ನು ಬಿಟ್ಟು ಬಂದಾಗ ಅವರು ನನ್ನ ಜೊತೆಯಲ್ಲೇ ನಡೆದುಕೊಂಡು ಗ್ರಾಮದ ಗಡಿಯವರೆಗೆ ಬಂದು, ಕಣ್ಣೀರು ಸುರಿಸುತ್ತಾ ನನ್ನನ್ನು ಬೀಳ್ಕೊಟ್ಟರು. ಈ ಸಂಗತಿಯನ್ನು ಮರೆಯುವಂತಿಲ್ಲ.''

ಶ್ರೀಮಾತೆಯವರು ತಮ್ಮ ಶರೀರವನ್ನು ತ್ಯಜಿಸಿದ ದಿನದಂದು (೨೧ ಜುಲೈ ೧೯೨೦) ಸ್ವಾಮಿ ನಿಖಿಲಾನಂದರು ಕಲ್ಕತ್ತೆಯಲ್ಲಿದ್ದರು. ಆಗ ಅವರು ಕಲ್ಕತ್ತದ 'ಅಮೃತ ಬಜಾರ್ ಪತ್ರಿಕೆ'ಯ ವರದಿಗಾರರಾಗಿದ್ದರು. ಅಂದು ಬೆಳಗ್ಗೆ ತಮಗೆ ಅರಿಯದಂತೆಯೆ ವಿಶೇಷ ರೀತಿಯಲ್ಲಿ 'ಉದ್ಬೋಧನ'ದಲ್ಲಿ ಹಾಜರಾದರು. ನಿದ್ರೆಯಿಂದ ಎದ್ದು ಅವರು ಬಾಗ್‌ಬಜಾರಿನ ಅಂಗಡಿಯಿಂದ ತಿಂಡಿ ಮಾಡಲು ಬ್ರೆಡ್ ಖರೀದಿಸಿ, ತಮ್ಮ ಮನೆಗೆ ಹೋಗದೆ ನೇರವಾಗಿ 'ಉದ್ಬೋಧನ'ವನ್ನು ತಲುಪಿದಾಗ ಕಳೆದ ರಾತ್ರಿ ಶ್ರೀಮಾತೆಯವರು ಮಹಾಸಮಾಧಿಯನ್ನು ಹೊಂದಿದ್ದು ತಿಳಿದುಬಂತು. 'ಉದ್ಬೋಧನ'ದ ಅಂಗಳದಲ್ಲಿ ತೆಗೆದ, ಶೋಕಾರ್ತ ಸಾಧು-ಭಕ್ತರ ಗ್ರೂಪ್ ಫೋಟೋದಲ್ಲಿ ಅವರು ತಮ್ಮ ಚಿತ್ರವನ್ನು ಗುರುತಿಸಿ ತೋರಿಸಿದರು.

ಸ್ವಾಮಿ ಶಾರದಾನಂದರನ್ನು ಸ್ಮರಿಸುತ್ತ ಅವರು ಹೇಳಿದರು: ''ನಾನು ಒಂದು ದಿನ ಶರತ್ ಮಹಾರಾಜರಿಗೆ ಹೇಳಿದೆ, 'ಮಹಾರಾಜ್, ನೀವು ಠಾಕೂರರ ಒಬ್ಬ ಮಹಾನ್ ಶಿಷ್ಯರು. ನೀವು ಅನಾಯಾಸವಾಗಿ, ಸ್ವೇಚ್ಛೆಯಿಂದ ನಮಗೆಲ್ಲ ಭಗವಂತನ ದರ್ಶನವನ್ನು ಮಾಡಿಸಬಹುದು. ಹೀಗಿರುವಾಗ ನೀವೇಕೆ ನಮಗೆ ಜಪಧ್ಯಾನ, ಸಾಧನೆ-ಭಜನೆಗಳನ್ನು ಮಾಡಲು ಹೇಳುತ್ತೀರಿ?' ಇದನ್ನು ಕೇಳಿದ ಅವರು ಪ್ರೀತಿಯಿಂದ ನುಡಿದರು, 'ನೋಡಪ್ಪ, ಠಾಕೂರರ ಕೃಪೆಯಿಂದ ನಾನು ಇತರರಿಗೂ ಭಗವದ್ದರ್ಶನ ಮಾಡಿಸಬಲ್ಲೆ. ಆದರೆ ನಾನು ಹಾಗೇನಾದರೂ ಮಾಡಿದರೆ, ಅದರಿಂದ ನಿನ್ನ ತಲೆ ಕೆಡಬಹುದು, ಇಲ್ಲವೆ ನೀನು ಮರಣಹೊಂದಬಹುದು. ಆಧ್ಯಾತ್ಮಿಕ ಸಾಧನೆಯಿಂದ ನಿನ್ನ ಶರೀರ-ಮನಸ್ಸುಗಳನ್ನು ಅಣಿಮಾಡಿಕೊಂಡರೆ ಈ ಅನುಭೂತಿಯನ್ನು ಧಾರಣೆ ಮಾಡಿಕೊಳ್ಳಲು ನಿನ್ನಿಂದ ಸಾಧ್ಯವಾಗುತ್ತದೆ.' ''

ಬೇರೊಂದು ಸಂದರ್ಭದಲ್ಲಿ ನಿಖಿಲಾನಂದರು ಸ್ವಾಮಿ ಶಾರದಾನಂದರ ಬಗ್ಗೆ ಹೇಳಿದ್ದರು: ''೧೯೨೫ರಲ್ಲಿ ಪುರಿಯಲ್ಲಿದ್ದಾಗ ನನ್ನನ್ನು ಅವರ ಸೇವಕನಾಗಿ ಕಾಶಿಯಲ್ಲಿ ಇರಿಸಿಕೊಂಡ ಕಾರಣವನ್ನು ತಿಳಿಯಪಡಿಸಿದರು. ಅವರು ನನಗೆಂದರು, 'ನೀನು ಮಾಯಾವತಿಯಲ್ಲಿದ್ದಾಗಿನಿಂದಲೂ ನಿನ್ನನ್ನು ಲಕ್ಷಿಸಿರುವೆ. ಮೊದಲು ನೀನು ರಾಮಕೃಷ್ಣರ ಜೀವನ ಚರಿತ್ರೆಯನ್ನು ಬರೆದೆ. ನಂತರ ನೀನು ಉತ್ತರ ಹಾಗೂ ಪಶ್ಚಿಮ ಭಾರತದ ವಿವಿಧ ಸ್ಥಳಗಳಲ್ಲಿ ಸುತ್ತಾಡಿದೆ. ಅಲ್ಲಿ ಕೆಲವು ಮಹಾರಾಜರು ಹಾಗೂ ಉನ್ನತ ಅಧಿಕಾರಿಗಳ ಆತಿಥ್ಯವನ್ನು ಪಡೆದಿರುವೆ. ಇವೆಲ್ಲ ಕೇಳಿ ನಾನೆಂದುಕೊಂಡೆ, ಈ ಯುವಕ ಸಂನ್ಯಾಸಿಯಾಗಬೇಕೆಂದಿರುವನು. ಆದರೆ ತಪ್ಪು ದಾರಿ ಹಿಡಿದು ಜೀವನವನ್ನು ಪ್ರಾರಂಭಿಸಿದ್ದಾನೆ - ಪುಸ್ತಕ ಬರೆಯಲು ಹಾಗೂ ಭಾಷಣ ಮಾಡಲು ಶುರು ಮಾಡಿದ್ದಾನೆ. ಸಂನ್ಯಾಸ ಜೀವನಕ್ಕೆ ಬೇಕಾಗಿರುವ ಯಾವ ಅರ್ಹತೆಯನ್ನೂ ಪಡೆದಿಲ್ಲ. ಇವನು ಅಹಂಕಾರದಿಂದ ಬೀಗುತ್ತಿದ್ದಾನೆ. ಇವನೆಂದಿಗೂ ಸಂನ್ಯಾಸಿಯಾಗಲಾರ.' ನಂತರ ಅವರೆಂದರು, 'ನಾವೆಲ್ಲ ಮೊದಲು ಸಾಧನೆಯನ್ನು ಮಾಡಿದೆವು. ಅನಂತರವೇ ನಾನು ಬರೆಯುವುಕ್ಕೆ, ಭಾಷಣ ನೀಡುವುದಕ್ಕೆ ಪ್ರಾರಂಭಿಸಿದೆ. ನಾನು ನಿಜವಾಗಿಯೂ ನಿನಗಾಗಿ ಉದ್ವಿಗ್ನನಾಗಿದ್ದೆ. ಆದ್ದರಿಂದಲೆ ಭಾಷಣ-ಪ್ರವಾಸದಿಂದ ನೀನು ಹಿಂದಿರುಗಿದಾಗ ನನ್ನ ಬಳಿ ಉಳಿದುಕೊಳ್ಳಲು ನಿನಗೆ ಹೇಳಿದೆ. ಆಗ ನೀನು ಸಾಧುಗಳ ಜೀವನ ಹೇಗಿರಬೇಕೆಂದು ತಿಳಿದುಕೊಳ್ಳಲು ಸಾಧ್ಯವಾಗುವುದು. ನಾನು ನಿನ್ನನ್ನು ನನ್ನ ಸಹಕಾರಿಯಾಗಿ ಕಾಶಿಗೆ ಕರೆದೊಯ್ಯಬಹುದೆಂದು ನಿನಗೆ ತಿಳಿಯಲಿಲ್ಲ, ಎಂಬ ವಿಷಯ ನನಗೆ ಗೊತ್ತು.'

ಅವರ ಕೃಪೆಗೆ ನಾನು ಕರಗಿಹೋದೆ. ಅದನ್ನು ನೆನೆದುಕೊಂಡರೆ ಈಗಲೂ ನನ್ನ ಕಣ್ಣುಗಳಲ್ಲಿ ನೀರು ತುಂಬುತ್ತದೆ.''

ಸ್ವಾಮಿ ನಿಖಿಲಾನಂದರು ಕೆಲವೊಮ್ಮೆ ತಮ್ಮ ಜೀವನದ ಅನುಭವ, ಠಾಕೂರರ ಶಿಷ್ಯರುಗಳ ಉಪದೇಶ ಹಾಗೂ ವಿವಿಧ ಬುದ್ಧಿಜೀವಿಗಳೊಡನೆ ತಮ್ಮ ಭೇಟಿಯ ನೆನಪನ್ನು ಹೇಳಿಕೊಳ್ಳುತ್ತಿದ್ದರು. ಒಮ್ಮೆ ಗಾಂಧೀಜಿಯವರಿಗೆ ಸಂಬಂಧಿಸಿದ ಈ ಘಟನೆಯನ್ನು ವರ್ಣಿಸಿದರು. ಅದು ಬಹುಶಃ ೧೯೨೩–೨೪ರಲ್ಲಿ ನಡೆದ ಘಟನೆ. ಸ್ವಾಮಿ ನಿಖಿಲಾನಂದರು ೧೯೨೩ರಲ್ಲಿ ಸಂನ್ಯಾಸವನ್ನು ಪಡೆದ ಬಳಿಕ ಭಾಷಣ ನೀಡಲು ನಾನಾ ಸ್ಥಳಗಳಿಗೆ ಹೋಗುತ್ತಿದ್ದರು. ಒಂದು ಸಲ ಅವರು ಗುಜರಾತಿನ ಸಬರಮತಿ ಆಶ್ರಮದ ಅತಿಥಿಗಳಾಗಿದ್ದಾಗ, ಗಾಂಧೀಜಿಯವರನ್ನು ಭೇಟಿಯಾಗಿದ್ದರು. ರಾತ್ರಿ ಊಟವಾದ ನಂತರ ನಿಖಿಲಾನಂದರು ಹಾಗೂ ಗಾಂಧೀಜಿಯವರ ಶಿಷ್ಯರ ನಡುವೆ ಭಾರಿ ವಿವಾದವುಂಟಾಯಿತು. ಆಧ್ಯಾತ್ಮಿಕತೆಯಲ್ಲಿ ಯಾರು ಮಿಗಿಲು – ವಿವೇಕಾನಂದರೋ ಅಥವಾ ಗಾಂಧೀಜಿಯವರೊ? ಎಂದು. ಗಾಂಧೀಜಿಯವರು ಆಗ ಭಾರತದ ಸ್ವಾತಂತ್ರ್ಯ ಸಂಗ್ರಾಮದ ನಾಯಕರಾಗಿದ್ದು, ದೇಶದಲ್ಲಿ ಹೆಸರುವಾಸಿಯಾಗಿದ್ದರು. ಗಾಂಧೀಜಿಯವರು ಸ್ವಾಮೀಜಿಯವರಿಗಿಂತ ಮಹಾನ್ ವ್ಯಕ್ತಿತ್ವ ಸಂಪನ್ನರೆಂದು ಅವರ ಶಿಷ್ಯರು ವಾದಿಸಿದರು. ಉತ್ತರವಾಗಿ ನಿಖಿಲಾನಂದರು, ''ಸ್ವಾಮಿ ವಿವೇಕಾನಂದರೇ ಶ್ರೇಷ್ಠರು. ಏಕೆಂದರೆ, ಅವರು ಭಗವಂತನ ಸಾಕ್ಷಾತ್ಕಾರ ಪಡೆದ ನಂತರವೇ ಜನರಿಗೆ ಒಳಿತನ್ನು ಮಾಡುತ್ತಾ ಹೋದರು. ಆದರೆ ಗಾಂಧೀಜಿಯವರು ಇನ್ನೂ ಭಗವಂತನ ದ್ವಾರವನ್ನು ತಟ್ಟುತ್ತಾ ಇದ್ದಾರಷ್ಟೆ.''

ಗಾಂಧೀಜಿ ಶಿಷ್ಯರು ನಿಖಿಲಾನಂದರ ಮಾತುಗಳನ್ನು ಒಪ್ಪಲಿಲ್ಲ. ಮರುದಿನ ಬೆಳಗ್ಗೆ ಅವರು ಗಾಂಧೀಜಿಯವರ ಬಳಿ ಹೋಗಿ, ''ಗಾಂಧೀಜಿ, ಈ ಯುವಕ ಸಂನ್ಯಾಸಿಗಳು 'ಸ್ವಾಮಿ ವಿವೇಕಾನಂದರು ನಿಮಗಿಂತ ದೊಡ್ಡವರು' ಎಂದು ಹೇಳುತ್ತಾರೆ, ಏಕೆಂದರೆ ಅವರು ಮೊದಲು ಸಾಕ್ಷಾತ್ಕಾರವನ್ನು ಪಡೆದು, ನಂತರ ದೇಶ ಕಲ್ಯಾಣಕ್ಕಾಗಿ ಕೆಲಸ ಮಾಡಿದರು. ನೀವು ಇನ್ನೂ ಭಗವಂತನ ಬಾಗಿಲನ್ನು ತಟ್ಟುತ್ತಿರುವಿರಿ ಎನ್ನುತ್ತಾರೆ'' ಎಂದರು.

ಗಾಂಧೀಜಿ ನಸುನಗುತ್ತ, ''ನಾನಿನ್ನೂ ಭಗವಂತನ ದ್ವಾರವನ್ನು ತಟ್ಟುತ್ತಿರುವೆ ಎಂದು ಈ ಯುವ ಸಂನ್ಯಾಸಿ ಹೇಳಿದ್ದಾದರೆ, ಅದು ನನಗೆ ಕೊಡಬಹುದಾದ ಬಹಳ ದೊಡ್ಡ ಪ್ರಶಂಸೆ''ಎಂದು ಹೇಳಿದರು.

ಸ್ವಾಮಿ ಶ್ರದ್ಧಾನಂದರ ಡೈರಿಯಲ್ಲಿ ನಿಖಿಲಾನಂದರು ಅಮೆರಿಕಾಗೆ ಹೋಗುವ ಮುನ್ನ ಅವರು ಮಹಾಪುರುಷ ಮಹಾರಾಜರ ಭೇಟಿ ಮಾಡಿದ್ದರ ವಿವರಣೆಯಿದೆ.

೨೪.೦೮.೧೯೩೧

ಪೂಜ್ಯ ದಿನೇಶ ಮಹಾರಾಜರು (ಸ್ವಾಮಿ ನಿಖಿಲಾನಂದರು) ಬೇಲೂರು ಮಠದಿಂದ ಬೀಳ್ಕೊಂಡು ಕೊಲೊಂಬೋ ಮಾರ್ಗವಾಗಿ ಅಮೆರಿಕಾಗೆ ಪ್ರಯಾಣ ಮಾಡಿದರು.

ಮಹಾಪುರುಷ ಮಹಾರಾಜರು, ''ನೀನು ಎಲ್ಲಿಗೆ ಹೋದರೂ ಅಲ್ಲಿ ನಾವಿದ್ದೇವೆ, ಠಾಕೂರರಿದ್ದಾರೆ, ಶ್ರೀಮಾತೆಯವರಿದ್ದಾರೆ, ಸ್ವಾಮೀಜಿ ಇದ್ದಾರೆ. ಜೈ ಗುರು ಮಹಾರಾಜ್, ಜೈ ಗುರು ಮಹಾರಾಜ್'' ಎಂದು ಕೈಮುಗಿದು ನಮಸ್ಕರಿಸಿದರು. ಹೋಗು – ಭಯಪಡಬೇಡ ಎಂದು ಬೆನ್ನುತಟ್ಟಿದರು. ''ಹೋಗಪ್ಪ, ಹೋಗು'' ಎಂದು ಆಶೀರ್ವದಿಸಿದರು. ಎಂಥ ಪ್ರೀತಿ ಕರುಣಾಪೂರ್ಣ ನುಡಿಗಳು!

ಆತ್ಮಾರಾಮದ (ಶ್ರೀರಾಮಕೃಷ್ಣರ ಅಸ್ಥಿ) ಒಂದು ತುಣುಕನ್ನು ದಿನೇಶ ಮಹಾರಾಜರೊಂದಿಗೆ ಕಳುಹಿಸಲಾಯಿತು. ಅದರ ಬಗ್ಗೆ ಮಹಾಪುರುಷಜೀ ಹೇಳಿದರು, ''ಆತ್ಮಾರಾಮರು ಎಲ್ಲೆಡೆಯೂ ಹರಸುತ್ತಿರುವರು. ನೋಡಪ್ಪ, ಬೌದ್ಧರ ಕಾಲದಲ್ಲಿ ಹೀಗಾಗಿತ್ತು. ಪುನಃ ಠಾಕೂರರು ಬಂದಿದ್ದಾರೆ – ಮತ್ತೆ ಅದೇ ರೀತಿ ಆಗುತ್ತಿದೆ. ಜೈ ಗುರು ಮಹಾರಾಜ್, ಜೈ ಗುರು ಮಹಾರಾಜ್!''

ನಂತರ ೧೯೫೯ರಲ್ಲಿ ಸೆಪ್ಟೆಂಬರ್ ೫ ರಂದು ಸ್ವಾಮಿ ನಿಖಿಲಾನಂದರು 'ಸಹಸ್ರ ದ್ವೀಪೋದ್ಯಾನ'ದಿಂದ ಸ್ವಾಮಿ ಶ್ರದ್ಧಾನಂದರಿಗೆ ಈ ವಿವರಣೆಯನ್ನು ನೀಡಿದರು:

''ನಾನು ಏನು ಕೆಲಸವನ್ನು ತಾನೆ ಮಾಡಿರುವೆ? ಕೆಲವು ಪುಸ್ತಕಗಳನ್ನು ಅನುವಾದಿಸಿದ್ದೇನೆ. ಅದೂ ಕೂಡ ಶ್ರೀ ಠಾಕೂರರ ಹಾಗೂ ಅವರ ಶಿಷ್ಯಂದಿರ ಆಶೀರ್ವಾದದಿಂದ ಮಾತ್ರವೆ ಸಾಧ್ಯವಾಗಿದೆ. ನಾನು ಈ ದೇಶಕ್ಕೆ ಹೊರಡುವ ಮುನ್ನ ಪೂಜ್ಯ ಮಹಾಪುರುಷರಿಗೆ ನಮಸ್ಕರಿಸಲು ಹೋದಾಗ ಅವರು ಹೇಳಿದರು, 'ಹೋಗಪ್ಪ ಮಗು! ಎಲ್ಲಿಗೆ ಹೋದರೂ ನೀನು ಜಯಶಾಲಿಯಾಗುವೆ. ವಿಶ್ವ ವಿಜಯಿಯಾಗುವೆ. ನಾನು ಸದಾ ನಿನ್ನೊಡನಿರುವೆ. ನರಕಕ್ಕೆ ಹೋದರೂ ನಿನ್ನ ಜೊತೆಯಲ್ಲಿರುತ್ತೇನೆ.' ಈ ಆಶೀರ್ವಚನವನ್ನು ಸ್ಮರಿಸಿಕೊಂಡರೆ ಕಣ್ಣುಗಳಲ್ಲಿ ನೀರು ಬರುತ್ತದೆ.''

ಶರತ್ ಮಹಾರಾಜರ ಬಗ್ಗೆ ನಿಖಿಲಾನಂದರು ಹೇಳಿದರು: ''ದೇಹತ್ಯಾಗದ ಹಿಂದಿನ ದಿನ ಪೂಜನೀಯ ಶರತ್ ಮಹಾರಾಜರು ಎಪೊಪ್ಲೆಕ್ಸಿ ಕಾಯಿಲೆಯಿಂದ ಹಾಸಿಗೆ ಹಿಡಿದರು. ಬಹುತೇಕ ಪ್ರಜ್ಞೆಯಿಲ್ಲ; ಎಡಗಡೆ ಸಂಪೂರ್ಣ ಪಾರ್ಶ್ವವಾಯು ಬಡಿದಿದೆ. ನಾನು ಹಾಸಿಗೆಯ ಪಕ್ಕದಲ್ಲಿ ಕುಳಿತಿದ್ದೆ. ಇದ್ದಕ್ಕಿದ್ದಂತೆ ಅವರು ತಮ್ಮ ಬಲಗೈಯಿಂದ ನನ್ನನ್ನು ಹಿಡಿದು ನನ್ನ ತಲೆಯನ್ನು ಅವರ ಎದೆಯ ಮೇಲಿರಿಸಿಕೊಂಡರು. ಮಾಯಾವತಿಯಲ್ಲಿದ್ದಾಗ ನಾನು ಠಾಕೂರರ ಜೀವನವನ್ನು ಬರೆದೆ, ಹಾಗೂ ನಂತರ ರಾಜಪುತಾನ ಮುಂತಾದ ಸ್ಥಳಗಳಲ್ಲಿ ಭಾಷಣ ನೀಡಿದೆ. ಆಮೇಲೆ ಒಂದು ವರ್ಷದ ಕಾಲ ಪೂಜನೀಯ ಶರತ್ ಮಹಾರಾಜರ ಬಳಿ ಇದ್ದಾಗ, ಒಂದು ದಿನ ಅವರು, ನನ್ನ ಮನಸ್ಸು ಕೀರ್ತಿ–ಯಶಸ್ಸುಗಳಿಂದ ಚಂಚಲವಾಗದಿರಲೆಂದು ವಿಶೇಷವಾಗಿ ಹರಸಿದರು.

''ನಿಜವಾಗಿಯೂ ಠಾಕೂರರು ಅಹೈತುಕ ಕೃಪಾಸಿಂಧುವೆಂದು ನಾನು ನಾಡಿ ನಾಡಿಯಲ್ಲಿಯೂ ಅನುಭವಿಸುತ್ತಿರುವೆ. ಅವರು ಯಾರ ಯಾವ ಬಯಕೆಯನ್ನೂ ಅಪೂರ್ಣವಾಗಿಸುವುದಿಲ್ಲ.''

*(ಸಮಾಪ್ತಿ)*